ಕಾರಣಕ್ಕಾಗಿಯೇ ಸಾಮಾನ್ಯವಾಗಿ ಐಟಿ ಕಂಪೆನಿಗಳ ಸಂದರ್ಶನದಲ್ಲಿ ಒಗಟಿನಂತಹ ಪಜಲ್‌ಗಳನ್ನು ಕೇಳುವ ರೂಢಿಯಿದೆ. ವೆಂಕಯ್ಯನ ವಿಷಯದಲ್ಲಿ ಅದು ಪ್ರಾತ್ಯಕ್ಷಿಕೆಯ ಮೂಲಕ ನಿದರ್ಶನಗೊಂಡಿತ್ತು. ಆದ್ದರಿಂದ ಯಾವ ಅನುಮಾನವೂ ಇಲ್ಲದಂತೆ ಅವನಿಗೆ ಕಂಪೆನಿಯಲ್ಲಿ ನೌಕರಿ ಕೊಡುವುದಕ್ಕೆ ಆ ಹದಿನೈದು ನಿಮಿಷದಲ್ಲಿ ಮನಸ್ಸು ನಿರ್ಧರಿಸಿಬಿಟ್ಟಿತ್ತು. ನಿಯಮಗಳನ್ನು ದಾಟುವ ಅವಶ್ಯಕತೆ ಈ ಸಂದರ್ಭದಲ್ಲಂತೂ ಇತ್ತು.

ಬಾಲ್ಯದ ಒಂದು ಸನ್ನಿವೇಶ ನನಗೆ ಯಾವತ್ತೂ ನೆನಪಾಗುತ್ತದೆ. ಪ್ರತಿ ವರ್ಷ ಬರುವ ಅನಂತ ಪದ್ಮನಾಭ ವ್ರತದ ದಿನ ಒಂದು ಕೆಂಪು ದಾರವನ್ನು ಮನೆಯವರೆಲ್ಲಾ ಬಲಗೈಗೆ ಕಟ್ಟಿಕೊಳ್ಳುವುದು ಸಂಪ್ರದಾಯವಾಗಿತ್ತು. ಬಂಧು ಬಳಗದವರೆಲ್ಲಾ ಸೇರಿ ಸುಮಾರು ಐವತ್ತು ಜನ ಆವತ್ತು ಊಟಕ್ಕೆ ಸೇರುತ್ತಿದ್ದೆವು. ಅಷ್ಟೂ ಜನರ ದಾರವನ್ನು ಎಲ್ಲಿಯೋ ಬೀರುವಿನ ಮೂಲೆಯಲ್ಲಿಟ್ಟ ಒಂದು ಪ್ಲಾಸ್ಟಿಕ್ ಡಬ್ಬದಲ್ಲಿ ಇಟ್ಟಿರುತ್ತಿದ್ದರು. ಅವು ಒಂದಕ್ಕೊಂದು ಸೇರಿಕೊಂಡು ಕಗ್ಗಂಟಾಗಿ ಹೋಗಿರುತ್ತಿದ್ದವು. ಅವನ್ನು ಬಿಡಿಸುವುದಕ್ಕೆ ಹಬ್ಬದ ಗಲಾಟೆಯಲ್ಲಿ ಯಾರಿಗೂ ಸಮಯವಿರುತ್ತಿರಲಿಲ್ಲ, ಸಹನೆಯೂ ಇರುತ್ತಿರಲಿಲ್ಲ. ಆದರೆ ನಮ್ಮ ಮನೆಯಲ್ಲಿ ಕಾಶವ್ವ ಎನ್ನುವ ಅನಾಥ ವಿಧವೆ ಇದ್ದಳು. ಬಾಲ್ಯದಲ್ಲಿಯೇ ಗಂಡನನ್ನು ಕಳೆದುಕೊಂಡ ಆಕೆ, ನಮ್ಮ ಮನೆಯಲ್ಲಿ ದುಡಿದುಕೊಂಡು ಬದುಕುತ್ತಿದ್ದಳು. ಆಕೆಗೆ ಈ ಕಗ್ಗಂಟನ್ನು ಬಿಡಿಸುವುದರಲ್ಲಿ ವಿಶೇಷ ಆಸಕ್ತಿ ಇತ್ತು. ಮನೆಯ ಅಂಗಳದಲ್ಲಿದ್ದ ಮಲ್ಲಿಗೆಯ ಹಂದರದ ಕೆಳಗಿನ ಕಟ್ಟೆಯ ಮೇಲೆ ಕುಳಿತು, ದಾಸರ ಪದವನ್ನು ಹಾಡುತ್ತಾ, ಆಕೆ ಈ ಕಗ್ಗಂಟನ್ನು ಬಿಡಿಸುತ್ತಿದ್ದಳು. ನನಗೂ ಕಗ್ಗಂಟನ್ನು ಬಿಡಿಸುವುದರಲ್ಲಿ ಅತ್ಯಂತ ಆಸಕ್ತಿ. ಆದ್ದರಿಂದ ಆಕೆಯ ಜೊತೆಗೆ ಕುಳಿತು ಒಂದೊಂದೇ ದಾರವನ್ನು ಕಗ್ಗಂಟಿಂದ ಬಿಡಿಸಿ, ಬೇರೆ ಇಡುತ್ತಿದ್ದೆ. ಸುಮಾರು ಒಂದು ಗಂಟೆಯ ಕಾಲದಲ್ಲಿ ನಾವಿಬ್ಬರೂ ಸೇರಿ ಐವತ್ತಕ್ಕೂ ಹೆಚ್ಚು ದಾರಗಳನ್ನು ಬಿಡಿಸಿಡುತ್ತಿದ್ದವು. ಮೊದಲು ಹಲವು ದಾರಗಳನ್ನು ಕಷ್ಟ ಪಟ್ಟು ಬಿಡಿಸಿದರೆ ಸಾಕು, ಉಳಿದವನ್ನು ಬಿಡಿಸುವುದು ಅಂತಹ ಸಮಸ್ಯೆಯಾಗುತ್ತಿರಲಿಲ್ಲ. ಮನೆಯವರೆಲ್ಲಾ ಒಬ್ಬೊಬ್ಬರಾಗಿ ಬಂದು, ಬಿಡಿಸಿಟ್ಟ ಪವಿತ್ರದಾರವೊಂದನ್ನು ತಮ್ಮ ಬಲಗೈ ಮೊಣಕಟ್ಟಿಗೆ ಕಟ್ಟಿಕೊಂಡು ಹೋಗುತ್ತಿದ್ದರು. ಎಲ್ಲರೂ ದಾರ ಕಟ್ಟಿಕೊಂಡ ಮೇಲೆ, ಕೊನೆಯದನ್ನು ಕಾಶವ್ವ ನನ್ನ ಕೈಗೆ ಕಟ್ಟುತ್ತಿದ್ದಳು. ವಿಧವೆಯಾದ್ದರಿಂದ ಆಕೆ ಪವಿತ್ರದಾರವನ್ನು ಧರಿಸುವಂತಿರಲಿಲ್ಲ. ಆದರೆ ನನ್ನ ಕೈಗೆ ಕಟ್ಟಿದ ನಂತರ, ತಲೆಯನ್ನು ಸವರಿ "ಕಗ್ಗಂಟು ಬಿಡಿಸೋ ಜಾಣತನ ನಿಂಗದೆ. ಮುಂದೆ ದೊಡ್ಡ ಉದ್ಯೋಗ ಮಾಡ್ತಿ. ಯಾವತ್ತೂ ಕಗ್ಗಂಟು ಬಿಡಿಸೋ ಕೆಲಸದಿಂದ ತಪ್ಪಿಸ್ಕೋಬೇಡ. ನನ್ನ ಮಾತು ನೆನಪಿಡು" ಎಂದು ಹರಸುತ್ತಿದ್ದಳು. ಈಗಲೂ ಕಾಶವ್ವನನ್ನು ನೆನಸಿಕೊಂಡರೆ ಸಾಕು, ನನ್ನ ಕಣ್ಣುಗಳು ಆರ್ದ್ರವಾಗುತ್ತವೆ. ಆಕೆಗೆ ಕಂಪ್ಯೂಟರ್ ಪ್ರೋಗ್ರಾಮಿಂಗ್ ಕಲಿಸಿಕೊಟ್ಟರೆ ಅದ್ಭುತವಾದದ್ದನ್ನು ಸಾಧಿಸಿಬಿಡುತ್ತಿದ್ದಳು ಎಂದು ಅನ್ನಿಸುತ್ತಿರುತ್ತದೆ. ಆದರೆ ಸಾಯುವ ತನಕವೂ ತುತ್ತು ಅನ್ನಕ್ಕಾಗಿ ಇನ್ನಿಲ್ಲದ ದೈನ್ಯತೆಯಿಂದ ಆಕೆ ಬದುಕನ್ನು ಕಳೆದಳು. ಕೆಟ್ಟ ಕಾಲವು ನಮ್ಮ ಬುದ್ಧಿವಂತಿಕೆಯನ್ನೇ ಆಪೋಶನ ತೆಗೆದುಕೊಂಡು ಬಿಡುತ್ತದೆ.

★★★

ಅಕ್ಷರಗಳನ್ನು ಕಾಂಪೌಂಡಿನ ಗೋಡೆಗೆ ಅಂಟಿಸುವ ಕೆಲಸವನ್ನು ರಂಗಣ್ಣಗೆ ಒಪ್ಪಿಸಿ, ನಾವಿಬ್ಬರೂ ಹೊರನಡೆದವು. ಸಾಮಾನ್ಯವಾಗಿ ರಿಸೆಪ್ಷನ್ ಬಾಗಿಲ ಬಳಿಯೇ ಅಭ್ಯರ್ಥಿಗಳಿಗೆ ವಿದಾಯ ಹೇಳುವ ನಾನು, ಈಗ ಖುಷಿಯಲ್ಲಿ ವೆಂಕಯ್ಯನ ಜೊತೆ ಅವನು ಬೈಕ್ ನಿಲ್ಲಿಸಿದ್ದ